ಕರ್ನಾಟಕ ಸರಕಾರ

# ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಆರೋಗ್ಯ ಪರಿಹಾರ ನೀಡುವ ಕುರಿತು

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ: RD 31 WGA 1991, ದಿನಾಂಕ: 27-03-1992.
2. ಸರ್ಕಾರಿ ಆದೇಶ ಸಂಖ್ಯೆ: MWD 59 WFWD 2009, ದಿನಾಂಕ: 01-08-2009.
3. ಸರ್ಕಾರಿ ಆದೇಶ ಸಂಖ್ಯೆ: MWD 50 WFWD 2011, ದಿನಾಂಕ: 31-03-2021.
4. ಸರ್ಕಾರಿ ಆದೇಶ ಸಂಖ್ಯೆ: MWD 13 WFWD 2013, ದಿನಾಂಕ: 01-02-2013.
5. ಸರ್ಕಾರಿ ಆದೇಶ ಸಂಖ್ಯೆ: KSWC 08 WFW 2019, ದಿನಾಂಕ: 23-08-2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆಯರ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನವನ್ನು ರಚಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ಮುಸ್ಲಿಂ **"ಮಹಿಳೆ ಮತ್ತು ಹೆಣ್ಣು ಮಕ್ಕಳಿಗೆ ಆರೋಗ್ಯ ಪರಿಹಾರ ನಿಧಿ"** ಎಂಬ ಯೋಜನೆಯನ್ನು ಪ್ರಾರಂಭಿಸಿ ಇದರ ಅಡಿಯಲ್ಲಿ ಅನುದಾನವನ್ನು ಮಂಜೂರು ಮಾಡಲು 2009-10 ನೇ ಸಾಲಿನಲ್ಲಿ ಆದೇಶ ಹೊರಡಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರಿ ಆದೇಶದಲ್ಲಿ ದಿನಾಂಕ: 05-04-2011 ರಿಂದ ಜಾರಿಗೆ ಬರುವಂತೆ ಕೆಲವು ಮಾರ್ಪಾಡುಗಳೊಂದಿಗೆ ಮೂರು ತಿಂಗಳ ಮಟ್ಟಿಗೆ ಪ್ರಾಯೋಗಿಕವಾಗಿ ಸದರಿ ಯೋಜನೆಯನ್ನು ಜಾರಿಗೆ ತಂದು ನಂತರ ಪರಿಷ್ಕರಿಸಲಾಗುವುದೆಂದು ಆದೇಶ ಹೊರಡಿಸಲಾಗಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಸರ್ಕಾರಿ ಆದೇಶದಲ್ಲಿ ಸದರಿ ಯೋಜನೆಗೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಸರ್ಕಾರಿ ಆದೇಶದಲ್ಲಿ ಸದರಿ ಯೋಜನೆಗೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿರುತ್ತದೆ.

ಪ್ರಸ್ತುತ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಿಂದ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನಕ್ಕೆ ಬಿಡುಗಡೆಗೊಳಿಸಲಾಗುತ್ತಿರುವ ವಾರ್ಷಿಕ ಅನುದಾನವು ಕಡಿಮೆಯಿದ್ದು, ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಮಂಜೂರಾಗಿರುವ ಅನುದಾನಕ್ಕಿಂತ ಅಧಿಕವಾಗಿ ಆರೋಗ್ಯ ಪರಿಹಾರ ಯೋಜನೆಯಲ್ಲಿ ಪರಿಹಾರವನ್ನು ಬಿಡುಗಡೆಗೊಳಿಸಲಾಗಿದ್ದು, ಪ್ರತಿಷ್ಠಾನದ ಯೋಜನೆಗಳಿಗೆ ಅನುದಾನದ ಕೊರತೆ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಷ್ಠಾನದ ವತಿಯಿಂದ ಜಾರಿಗೊಳಿಸಲಾಗುತ್ತಿರುವ ಆರೋಗ್ಯ ಪರಿಹಾರ ಯೋಜನೆಯಲ್ಲಿ ವಿಧಿಸಲಾಗಿರುವ ಷರತ್ತುಗಳಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡುವ ಬಗ್ಗೆ ನಿರ್ಧರಿಸಿ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: KSWFWD 09 WFW 2023-24,**
**ಬೆಂಗಳೂರು, ದಿನಾಂಕ: 04-07-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಮಹಿಳಾ ಹಾಗೂ ಹೆಣ್ಣು ಮಕ್ಕಳ ಆರೋಗ್ಯ ಪರಿಹಾರ ನಿಧಿ ಎಂಬ ಯೋಜನೆ ಅಡಿಯಲ್ಲಿ ಚಿಕಿತ್ಸೆಯನ್ನು ಪಡೆಯಲು ಷರತ್ತುಗಳಿಗೆ ಒಳಪಡಿಸಿ ಅನುದಾನವನ್ನು ಮಂಜೂರು ಮಾಡಲು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ಆದೇಶಿಸಿದೆ.

ಮು.ತಿ.ನೋ

**-:ಷರತ್ತುಗಳು:-**

1. ಈ ಯೋಜನೆಯು ಅಲ್ಪಸಂಖ್ಯಾತರ ಮುಸ್ಲಿಂ ಮಹಿಳಾ ಹಾಗೂ ಹೆಣ್ಣು ಮಕ್ಕಳಿಗೆ ಮಾತ್ರ ಅನ್ವಯಿಸುವುದು.(ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಹೊರ ರಾಜ್ಯದ ನಿವಾಸಿಗಳಿಗೆ ಈ ಯೋಜನೆಯು ಅನ್ವಯಿಸುವುದಿಲ್ಲ)
2. ಈ ಯೋಜನೆಯಡಿಯಲ್ಲಿ ಚಿಕಿತ್ಸಾ ಪರಿಹಾರ ಪಡೆಯಲು ಫಲಾನುಭವಿಗಳ ಕುಟುಂಬದ ವಾರ್ಷಿಕ ಆದಾಯ ರೂ. 1,20,000/- (ಒಂದು ಲಕ್ಷದ ಇಪ್ಪತ್ತು ಸಾವಿರಗಳು ಮಾತ್ರ) ಗಳಿಗೆ ಮೀರತಕ್ಕದಲ್ಲ.
3. ಆದಾಯ ತೆರಿಗೆ ನೀಡುವ ಹಾಗೂ ಕೇಂದ್ರ, ರಾಜ್ಯ ಮತ್ತು ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಕಾರ್ಯನಿರ್ವಹಿಸುವ ವ್ಯಕ್ತಿಗಳ ಕುಟುಂಬಕ್ಕೆ ಈ ಯೋಜನೆ ಅನ್ವಯಿಸುವುದಿಲ್ಲ.
4. ಅರ್ಜಿದಾರರು ಆರೋಗ್ಯ ಪರಿಹಾರ ನಿಧಿಯ ನಿಗದಿತ ಅರ್ಜಿ ನಮೂನೆಯೊಂದಿಗೆ ಸಂಬಂಧಪಟ್ಟ ತಹಸೀಲ್ದಾರರು ನೀಡಿರುವ ಆದಾಯ ಪ್ರಮಾಣ ಪತ್ರದೊಂದಿಗೆ ಅಥವಾ ಕುಟುಂಬದ ಬಿ.ಪಿ.ಎಲ್ ಹಾಗೂ ಅಂತ್ಯೋದಯ ಪಡಿತರ ಚೀಟಿಯ ದೃಢೀಕೃತ ಜೆರಾಕ್ಸ್ ಪ್ರತಿಯೊಂದಿಗೆ ಸಲ್ಲಿಸತಕ್ಕದ್ದು.
5. ಸರ್ಕಾರದ ಅಧಿಕೃತವಾದ ಹಾಗೂ ಮಾನ್ಯತೆ ಪಡೆದ/ಪಡೆಯದ ಯಾವುದೇ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂ ರವರು ನೀಡಿರುವ ಮೂಲ ಅಂದಾಜು ಪತ್ರ ಸಲ್ಲಿಸತಕ್ಕದ್ದು.(ಚಿಕಿತ್ಸೆಗೆ ಮೂಲ ಸೌಕರ್ಯಯಿಲ್ಲದ ಕ್ಲಿನಿಕ್‌ಗಳು ಹೊರತು ಪಡಿಸಿ)
6. ಅರ್ಜಿಯನ್ನು ಪೂರ್ಣ ಮಾಹಿತಿಯೊಂದಿಗೆ ಭರ್ತಿ ಮಾಡಿ ನಿಗಧಿ ಪಡಿಸಿದ ದಾಖಲಾತಿಗಳೊಂದಿಗೆ ರೋಗಿ ಅಥವಾ ಅವರ ಗಂಡ/ಪೋಷಕರು ಮಾತ್ರ ಸಲ್ಲಿಸತಕ್ಕದ್ದು.(ಆಸ್ಪತ್ರೆಯ ಮೂಲ ಅಂದಾಜು ಪ್ರಮಾಣ ಪತ್ರ, ಆಸ್ಪತ್ರೆ ಮೂಲ ಬಿಡುಗಡೆ ಪ್ರಮಾಣ ಪತ್ರ, ಮೂಲ ಆಸ್ಪತ್ರೆಯ ರಸೀದಿ, ಬಿ.ಪಿ.ಎಲ್ ಪಡಿತರ ಚೀಟಿ/ವಾರ್ಷಿಕ ಆದಾಯ ಪ್ರಮಾಣ ಪತ್ರ (ಗರಿಷ್ಠ ರೂ. 1.20/- ಲಕ್ಷಗಳು), ಆಧಾರ್ ಗುರುತಿನ ಚೀಟಿ/ ಭಾರತ ಚುನಾವಣ ಆಯೋಗ ನೀಡಿರುವ ಗುರುತಿನ ಚೀಟಿಯ ನೆರಳಚ್ಚು ಪ್ರತಿ, 3 ಪಾಸ್ಪೋರ್ಟ್ ಭಾವಚಿತ್ರ, ನವಜಾತ ಶಿಶುವಿನ ಆರೋಗ್ಯ ಪರಿಹಾರ ಪ್ರಕರಣವಿದ್ದಲ್ಲಿ ಜನನ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು)
7. ವೈದ್ಯಕೀಯ ಚಿಕಿತ್ಸೆ ಪಡೆಯಬೇಕಾಗಿರುವ ರೋಗಿಯು ಸಂಬಂಧಪಟ್ಟ ಆಸ್ಪತ್ರೆಯ ಚಿಕಿತ್ಸಾ ವೆಚ್ಚದ ಮೂಲ ಅಂದಾಜು ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.(ಚಿಕಿತ್ಸ ವೆಚ್ಚದ ಅಂದಾಜು ಪ್ರಮಾಣ ಪತ್ರ ಮುದ್ರಿತ ದಿನಾಂಕದಿಂದ ಒಂದು ತಿಂಗಳೊಳಗೆ ಇರಬೇಕು)
8. ರೋಗಿಯು ಆಸ್ಪತ್ರೆ ಖರ್ಚನ್ನು ಸ್ವತಃ ಭರಿಸಿ ಬಿಡುಗಡೆಯಾಗಿದ್ದಲ್ಲಿ ಅನುದಾನ ಪಡೆಯಲು ಆಸ್ಪತ್ರೆಯಿಂದ ಮೂರು ತಿಂಗಳ ಒಳಗಾಗಿರುವ ಮೂಲ ಬಿಡುಗಡೆ ಪ್ರಮಾಣ ಪತ್ರ ಹಾಗೂ ಮೂಲ ರಸೀದಿಯನ್ನು **(Discharge Summary & Final Bills)** ಸಲ್ಲಿಸಿದ್ದಲ್ಲಿ ನೇರವಾಗಿ ರೋಗಿಯ ಹೆಸರಿಗೆ ಚೆಕ್ಕು ಮೂಲಕ ಆರೋಗ್ಯ ಪರಿಹಾರವನ್ನು ನೀಡಲಾಗುವುದು.(ಅನಧಿಕೃತ ಔಷಧಾಲಯಗಳ ರಸೀದಿ/ಬಿಲ್ಲುಗಳನ್ನು ಪರಿಗಣಿಸಲಾಗುವುದಿಲ್ಲ)
9. ಆಘಾತಕಾರಿ ಕಾಯಿಲೆಗಳಾದ ಹೃದ್ರೋಗ, ಕ್ಯಾನ್ಸರ್, ಮೂತ್ರಪಿಂಡ ಕಾಯಿಲೆಗಳು, ನರರೋಗ, ಮೆದುಳು, ಶ್ವಾಸಕೋಶ ಹಾಗೂ ಯಕೃತ್ತು ಸಂಬಂಧಿತ ಕಾಯಿಲೆಗಳು, ಆಘಾತಕಾರಿ ಅಪಘಾತ ಪ್ರಕರಣಗಳು (ಮೋಟಾರು ವಾಹನ ವಿಮೆಯಡಿ ಒಳಗೊಂಡ ಪ್ರಕರಣಗಳನ್ನು ಹೊರತುಪಡಿಸಿ), ನಿಯೋನಾಟಲ್ (ನವಜಾತ ಶಿಶುಗಳ ಕಾಯಿಲೆಗಳು) ಹಾಗೂ ಇನ್ನಿತರೇ ದೊಡ್ಡ ಪ್ರಮಾಣದ ಶಸ್ತ್ರಚಿಕಿತ್ಸೆಗೆ ಒಳಪಟ್ಟಿರುವಂತಹ ರೋಗಿಗಳಿಗೆ ಕನಿಷ್ಠ ರೂ. 25,000/- ರಿಂದ ಗರಿಷ್ಠ ಪರಿಹಾರ ರೂ. 2,00,000/- ಕ್ಕೆ ಮಂಜೂರು ಮಾಡುವುದು.
10. ಹಿಮೋಡಯಾಲಿಸೀಸ್ ಹಾಗೂ ಕ್ಯಾನ್ಸರ್ ರೋಗಿಗಳಿಗೆ ಗರಿಷ್ಠ ರೂ. 2.00 ಲಕ್ಷವನ್ನು ಚಿಕಿತ್ಸಾ ಅವಧಿಯನ್ನು ಪರಿಗಣಿಸಿ ವಿವಿಧ ಕಂತುಗಳಲ್ಲಿ ಹಾಗೂ ಇನ್ನಿತರೆ ಪ್ರಕರಣಗಳಲ್ಲಿ ಅಂದರೆ ಹೃದ್ರೋಗ, ನರರೋಗ, ಮೆದುಳು, ಶ್ವಾಸಕೋಶ ಹಾಗೂ ಯಕೃತ್ತು ಸಂಬಂಧಿತ ಕಾಯಿಲೆಗಳು, ರೋಗಿಗೆ ಒಂದು ಬಾರಿ ಮಾತ್ರ ಆರೋಗ್ಯ ಪರಿಹಾರ ಮಂಜೂರು ಮಾಡಲಾಗುವುದು.
11. ಕಣ್ಣಿನ ಪೊರೆ **Cataract** ಶಸ್ತ್ರ ಚಿಕಿತ್ಸೆಗಳಿಗೆ ರೂ. 30,000/- (2 ಕಣ್ಣಿಗಳಿಗೆ) ಕ್ಕೆ ಆರೋಗ್ಯ ಪರಿಹಾರ ನಿಧಿ ಮಂಜೂರು ಮಾಡಲಾಗುವುದು.

ಪು.ತಿ.ನೋ

12. **<u>Fibroids Uterus/Cys/Hernia/Kidney Stone/Burning</u>** ಚಿಕಿತ್ಸೆಗಳಿಗೆ ರೂ. 10,000/- ರಿಂದ ರೂ. 25,000/- ಗಳ ಆರೋಗ್ಯ ಪರಿಹಾರ ನಿಧಿ ಮಂಜೂರು ಮಾಡಲಾಗುವುದು
13. ಉಪಜನ್ಮದಿಂದ ರೋಗಿಯು ಕಿವುಡು ಇದ್ದಲ್ಲಿ ಆಸ್ಪತ್ರೆ ವೆಚ್ಚ ರೂ. 10.00 ಲಕ್ಷಕ್ಕಿಂತ ಅಧಿಕ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಗರಿಷ್ಠ ರೂ. 1.00 ಲಕ್ಷಗಳ ಆರೋಗ್ಯ ಪರಿಹಾರ ನಿಧಿ ಮಂಜೂರು ಮಾಡಲಾಗುವುದು.
14. ಕೆಲವು ವಿಶೇಷ ಪ್ರಕರಣಗಳಲ್ಲಿ ರಾಜ್ಯದ ನಿವಾಸಿಗಳು ತುರ್ತು ಚಿಕಿತ್ಸೆಗಾಗಿ ಹೊರ ರಾಜ್ಯಗಳಲ್ಲಿ ಚಿಕಿತ್ಸೆ ಪಡೆಯಬೇಕಾಗಿದ್ದಲ್ಲಿ/ಪಡೆದಿದ್ದಲ್ಲಿ ಅಂತಹ ರೋಗಿಯಿಂದ ಪೂರ್ಣ ಮಾಹಿತಿಯೊಂದಿಗೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಆರೋಗ್ಯ ಪರಿಹಾರವನ್ನು ಮಂಜೂರು ಮಾಡಲಾಗುವುದು.
15. ಬೆನ್ನುಹುರಿ **<u>(Spinal Cord)</u>** ಸಂಬಂಧಿತ ಚಿಕಿತ್ಸೆಗಳಿಗೆ ರೂ. 25,000/- ರಿಂದ ರೂ. 50,000/- ಆರೋಗ್ಯ ಪರಿಹಾರ ನಿಧಿ ಮಂಜೂರು ಮಾಡಲಾಗುವುದು.
16. ತುರ್ತು ಪ್ರಕರಣಗಳಲ್ಲಿ ರೋಗಿಯಿಂದ ಸ್ವೀಕರಿಸಿದ ಅರ್ಜಿಯನ್ನು /ಮಾನ್ಯ ಸಚಿವರು ಮೌಖಿಕವಾಗಿ ಆದೇಶಿಸುವಂತಹ ವಿಶೇಷ ಪ್ರಕರಣಗಳಿಗೆ ಪರಿಹಾರ ಬಿಡುಗಡೆ ಮಾಡಿ ಘಟನೋತ್ತರ ಆದೇಶ/ಮಂಜೂರಾತಿಯನ್ನು ಕಡತದಲ್ಲಿ ಪಡೆಯುವುದು.
17. ಜ್ವರ, ಕೆಮ್ಮು, ನೆಗಡಿ, ಸಾಮಾನ್ಯ ಹೆರಿಗೆ ಹಾಗೂ ಸಿಜರಿನ್ 'ಸಿ' ಸೆಕ್ಷನ್ ಅಂತಹ ಪ್ರಕರಣಗಳನ್ನು ಪರಿಗಣಿಸಲಾಗುವುದಿಲ್ಲ.
18. ಆರೋಗ್ಯ ಪರಿಹಾರ ನಿಧಿಯಿಂದ ವೈದ್ಯಕೀಯ ವೆಚ್ಚಕ್ಕೆ ಪರಿಹಾರ ಬಿಡುಗಡೆ ಮಾಡಲು ಆದೇಶವಾಗಿರುವ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆದಿರುವ ವ್ಯಕ್ತಿಯು ಮೃತಪಟ್ಟ ನಂತರ ಪರಿಹಾರ ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
19. ಯಶಸ್ವಿನಿ/ಆರೋಗ್ಯ ಕರ್ನಾಟಕ/ಆಯುಷ್ಮಾನ್ ಭಾರತ ಹಾಗೂ ಇತರೆ ಯಾವುದಾದರು ಕೇಂದ್ರದ ಮತ್ತು ರಾಜ್ಯದ ಆರೋಗ್ಯ ಪರಿಹಾರ ಯೋಜನೆಯ ಪೂರ್ಣ ಪ್ರಮಾಣದಲ್ಲಿ ಸೌಲಭ್ಯವನ್ನು ಪಡೆದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
20. ವಿಮಾ ಕಂಪನಿಗಳಿಂದ ಪೂರ್ಣ ಪ್ರಮಾಣದಲ್ಲಿ ಆರೋಗ್ಯ ಪರಿಹಾರ ಸೌಲಭ್ಯವನ್ನು ಪಡೆದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
21. ಆತ್ಮಹತ್ಯೆ ಒಳಗೊಂಡಂತಹ ಚಿಕಿತ್ಸೆಗಳ ಪ್ರಕರಣಗಳು ಪರಿಗಣಿಸಲಾಗುವುದಿಲ್ಲ.
22. ಆರೋಗ್ಯ ಪರಿಹಾರ ಯೋಜನೆಯ ವಾರ್ಷಿಕ ವೆಚ್ಚವು ಸರ್ಕಾರದಿಂದ ಪ್ರತಿ ವರ್ಷ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನಕ್ಕೆ ಬಿಡುಗಡೆಗೊಳಿಸಲಾಗುವ ವಾರ್ಷಿಕ ಅನುದಾನವನ್ನು ಮೀರತಕ್ಕದ್ದಲ್ಲ.

ಮೇಲ್ಕಂಡ ಯೋಜನೆಯ ವೆಚ್ಚವನ್ನು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯಿಂದ ಪ್ರತಿ ವರ್ಷ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನಕ್ಕೆ ನೀಡಲಾಗುವ ಅನುದಾನದಿಂದ ಭರಿಸಲಾಗುವುದು.

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಅಧ್ಯಕ್ಷರಿಂದ
ಅನುಮೋದಿತ

**(ಸರ್ಫರಾಜ್ ಖಾನ್)**
ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನ

**<u>ಇವರಿಗೆ:</u>**

1) ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನ ಹಾಗೂ ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.